## ರಾಜಕೀಯ ಬೇಡ

ಝೀ ಟಿವಿ ಕನ್ನಡದ 'ವೀಕ್ ಎಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ದಯವಿಟ್ಟು ರಾಜಕೀಯ ನಾಯಕರನ್ನು ಸಾಧಕರ ಕುರ್ಚಿಯ ಮೇಲೆ ಕೂಡಿಸಬೇಡಿ. ಸತ್ಯ, ಶಾಂತಿ, ತ್ಯಾಗ ಇದು ನಮ್ಮ ಭಾರತದ ಮೂಲ ಸಂಸ್ಕೃತಿ. ಮೇಲ್ಕಂಡ ಮೂರನ್ನೂ ಅನುಸರಿಸದೇ ಇರುವವರನ್ನು ದಯವಿಟ್ಟು ಸಾಧಕರ ಕುರ್ಚಿಯ ಹತ್ತಿರವೂ ಕರೆಯಬೇಡಿ ಎಂಬುದು ನಮ್ಮ ಮನವಿ.

ಈ ಕಾರ್ಯಕ್ರಮದಲ್ಲಿ ಒಬ್ಬರು ಗಣ್ಯರನ್ನು ಆಸನದಲ್ಲಿ ಕುಳ್ಳಿರಿಸಿ ರಮೇಶ್ ಅವರನ್ನು ಗುಣಗಾನ ಮಾಡುತ್ತಾರೆ. ಆದರೆ ಹೀಗೆ ಮಾಡುವಾಗ ಅವರ ಸುತ್ತ, ನವಗ್ರಹಗಳಿಗೆ ಪ್ರದಕ್ಷಿಣೆ ಹಾಕುವಂತೆ– ಅನೇಕ ಬಾರಿ ಸುತ್ತುವುದು ಏಕೆ? ಅತಿಥಿಗಳಿಗೆ ಮುಜುಗರ ಆಗುವುದಿಲ್ಲವೇ?

–ಲಲಿತಾ ಅಂಬಾಗಿಲು, ಉಪ್ಪುಂದ; ಕೊ.ಸು. ನರಸಿಂಹ ಮೂರ್ತಿ, ಎನ್.ಡಿ. ವೆಂಕಟಸುಬ್ಬು, ಮೈಸೂರು

## ಅದ್ಭುತ ಹಾಡುಗಾರ

ಟಿವಿಯಲ್ಲಿ ದಿನ ನಿತ್ಯ ಹಲವಾರು ಕಾರ್ಯಕ್ರಮಗಳನ್ನು ನೋಡುತ್ತೇವೆ. ಕೆಲವು ಮನಸ್ಸಿಗೆ ಬಹಳ ಕಿರಿ ಕಿರಿ ಉಂಟು ಮಾಡಿದರೆ, ಇನ್ನು ಕೆಲವು ಮನಸ್ಸಿಗೆ ನೆಮ್ಮದಿ ನೀಡಬಹುದು. ಸ.ರಿ.ಗ.ಮ.ಪ. ಕಾರ್ಯಕ್ರಮದಲ್ಲಿ ಕಲಬುರಗಿಯ ಸುನೀಲ್ ಅವರ ಅಮ್ಮನ ಜೊತೆ ಹಾಡಿದರು. ಆ ಸಂದರ್ಭದಲ್ಲಿ ತೀರ್ಪುಗಾರರು, ಸಂಗೀತಗಾರರು ಸ್ಥಳದಲ್ಲಿದ್ದ ಎಲ್ಲರೂ ಸುನೀಲನ ಬಗ್ಗೆ ಮೆಚ್ಚುಗೆಯ ಮಾತಾನಾಡಿದ್ದು ನೋಡಿ ಕಣ್ಣೀರು ತಡೆಯಲಾಗಲಿಲ್ಲ. ನಿಜಕ್ಕೂ ಸುನೀಲ್ ಬಹಳ ಅದ್ಭುತವಾಗಿ ಹಾಡಿದ. ಅಭಿನಂದನೆಗಳು.

–ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ಸಿದ್ಧ ಸೂತ್ರ

ಇದು ಯಾವುದೇ ಭಾಷೆಯ ಧಾರಾವಾಹಿಗಳಿಗೂ ಅನ್ವಯಿಸುತ್ತದೆ. ಇವುಗಳಲ್ಲಿನ ಸಂಭಾಷಣೆಗಳನ್ನು ಗಮನಿಸಿದಾಗ ಎಲ್ಲದರಲ್ಲಿಯೂ ಒಂದೇ ತೆರನಾದ ಮಾತುಗಳು ಇರುತ್ತವೆ. ಅದನ್ನು ಹೇಳುವ ಪಾತ್ರಧಾರಿಗಳು ಬೇರೆ ಅಷ್ಟೆ. ಅದರಲ್ಲೂ ಖಳ ನಾಯಕ/ನಾಯಕಿಯಿಂದ ಹೇಳಿಸುವ ಮಾತುಗಳಲ್ಲಿ ಇದು ಎದ್ದು ಕಾಣುತ್ತದೆ. ಏಕೆಂದರೆ ಯಾವುದೇ ಧಾರಾವಾಹಿ ಇರಲಿ, ಅಲ್ಲಿ ಇದೊಂದೇ ಪಾತ್ರ ಹೆಚ್ಚು ಢಾಳಾಗಿರುವಂತೆ ಮಾಡಿರುತ್ತಾರೆ. ಬಹುಶಃ ಎಲ್ಲ ಧಾರಾವಾಹಿಗಳ ಮಾತುಗಳು ತಯಾರಾಗುವುದು ಒಂದೇ ಕಡೆ ಎನಿಸುತ್ತದೆ.

ನಮ್ಮಲ್ಲಿ ಅನೇಕ ಮಾದರಿಯ ನಿತ್ಯ ಪರಿಕರ ವಸ್ತುಗಳು ಬೇರೆ ಬೇರೆ ಸಂಸ್ಥೆಗಳ ಹೆಸರಿನಲ್ಲಿ ಮಾರುಕಟ್ಟೆಗೆ ಬಂದಿರುತ್ತವೆ. ಇಲ್ಲಿ ಸಣ್ಣ ಉದಾಹರಣೆಗಳನ್ನು ಹೇಳಬೇಕೆಂದರೆ ನಮ್ಮ ಪಕ್ಕದ ತಮಿಳುನಾಡಿನಲ್ಲಿನ ಕೊಯಮತ್ತೂರಿನಲ್ಲಿ ತಯಾರಾಗುವ ಮೋಟಾರುಗಳು ವಿವಿಧ ಯಂತ್ರಗಳಲ್ಲಿ ಬಳಕೆಯಾಗುತ್ತವೆ. ಈ ಯಂತ್ರಗಳು ವಿವಿಧ ಕಂಪೆನಿಗಳ ಹೆಸರಿನಲ್ಲಿ ಮಾರುಕಟ್ಟೆಗೆ ಬಂದಿರುತ್ತವೆ. ಅವು ಯಾವುದೇ ಬ್ರಾಂಡ್ ಆಗಿರಲಿ ಒಳಗಿರುವುದು ಅಲ್ಲಿ ತಯಾರಾದ ಮೋಟಾರುಗಳು. ಇದು ನಮ್ಮ ಧಾರಾವಾಹಿಗಳಿಗೂ ಅನ್ವಯಿಸಬಹುದಲ್ಲವೇ. ಅವುಗಳ ತಯಾರಕರಿಗೆ ಹೊಸತನವೇ ಗೊತ್ತಿಲ್ಲ ಅಥವ ಬೇಕಿಲ್ಲ. ಇನ್ನು ಕೆಲವು ಕಲಾವಿದರಿಗೆ ಕನ್ನಡದ ಶುದ್ಧ ಗಂಧವೇ ಇಲ್ಲ. ಅವರಿಗೆ ಅಕಾರ ಹಕಾರಗಳ ಅರಿವೇ ಇಲ್ಲದೇ ಮಾತಾಡುತ್ತಾರೆ. ಇದು ನಿರ್ದೇಶಕರಿಗೆ ಗೊತ್ತಿಲ್ಲವೇ ಅಥವಾ ಜಾಣ ಕಿವುಡು ಇರಬಹುದೇ.

–ಕೆ.ಎಸ್.ಸೋಮೇಶ್ವರ, ಬೆಂಗಳೂರು

ವಾರದ ಪತ್ರ

## ರಾಜಕೀಯ ವೈಭವೀಕರಣ

ಝೀ ಕನ್ನಡ ವಾಹಿನಿಯಲ್ಲಿ ಮೂಡಿ ಬರುತ್ತಿರುವ 'ವೀಕ್ ಎಂಡ್ ವಿತ್ ರಮೇಶ್' ಕಾರ್ಯಕ್ರಮವನ್ನು ಅದ್ವಿತೀಯ ಸಾಧನೆ ಮಾಡಿದ ವ್ಯಕ್ತಿಗಳ ಪರಿಚಯಕ್ಕೆ ಸೀಮಿತವಾಗಿಡುವ ರಿವಾಜು ಇತ್ತೀಚೆಗೆ ಬದಲಾಗುತ್ತಿರುವಂತಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಾಧಕರ ಆಯ್ಕೆಯ ಮಾನದಂಡಗಳಲ್ಲಿ ರಾಜಕೀಯ ಪಕ್ಷಗಳನ್ನು ಹೊರಗಿಡುವುದು ಮುಖ್ಯ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಾಧಕರ ವೈಯಕ್ತಿಕ ಯಶೋಗಾಥೆಯ ಬಗ್ಗೆ ಹೆಚ್ಚು ಗಮನ ಹರಿಸುವುದು ಅವಶ್ಯಕವೇ ಹೊರತು ಪಕ್ಷಗಳ ಪ್ರಣಾಳಿಕೆಯ ವಿಚಾರವಲ್ಲ.

ರಾಜಕೀಯ ಸುದ್ದಿಗಳನ್ನು ನಿತ್ಯವೂ ಹಲವಾರು ದೃಶ್ಯ ವಾಹಿನಿಗಳು ಎಡೆಬಿಡದೇ ರಂಗು–ರಂಗಾಗಿ ಬಿತ್ತರಿಸುತ್ತವೆ. ಅಧಿಕಾರದಲ್ಲಿರುವ ರಾಜಕೀಯ ಮುಖಂಡರೊಡನೆ ಸಂವಾದ ಅನುಕೂಲ–ಸಿಂಧು ಪ್ರವೃತ್ತಿ ಮಾತ್ರವಲ್ಲ ರಾಜಕೀಯ ವೈಭವೀಕರಣವೆಂದೇ ಪರಿಗಣಿಸಬಹುದು. ಈ ರೀತಿಯ ಆಯ್ಕೆ ಅನಿವಾರ್ಯವೇ ಆದರೆ, ಮುಂದಿನ ದಿನಗಳಲ್ಲಿ ವೀಕ್ಷಕರ ಮೆಚ್ಚುಗೆ ಗಳಿಸಿರುವ ರಮೇಶ್ ಅರವಿಂದ್ ಅವರ ಕಾರ್ಯಕ್ರಮ ಕೇವಲ ಓಲೈಕೆಗೋಸ್ಕರ ಆಯೋಜಿಸಿದ ರಾಜಕೀಯ ಸಂವಾದ ಆಗುವುದರಲ್ಲಿ ಸಂದೇಹವಿಲ್ಲ. ಆಯೋಜಕರು ವೀಕ್ಷಕರ ಮಾನಸಿಕ ಸೂಕ್ಷ್ಮತೆಯನ್ನು ಅರಿತು ಸಾಧಕರ ಆಯ್ಕೆಗೆ ಮುಂದಾಗಲಿ.

–ರಾಜೀವ್ ಎನ್. ಮಾಗಲ್, ಬೆಂಗಳೂರು

## ಗುರೂಜಿ ಪಟ್ಟ

ದೇವಿಶ್ರೀ ಗುರೂಜಿ, ಆರ್ಯವರ್ಧನ್ ಪ್ರಕರಣಗಳಾದ ಮೇಲೆ ಅನಾಮಿಕ ಜ್ಯೋತಿಷಿಗಳನ್ನೋ ಸಂಖ್ಯಾಶಾಸ್ತ್ರಜ್ಞರನ್ನೋ ಕರೆತಂದು, ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿ, 'ಗುರೂಜಿ' ಪಟ್ಟಕ್ಕೇರಿಸುವುದು ನಮ್ಮ ಮಾಧ್ಯಮಗಳೇ ಎನಿಸುತ್ತದೆ. ಅವರು ಏನಾದರೂ ಅವಾಂತರ ಮಾಡಿಕೊಂಡಾಗ ಅದರ ಬಗ್ಗೆ ಗಂಟೆಗಟ್ಟಲೇ ವರದಿ ಪ್ರಸಾರ ಮಾಡುವುದು ಅದೇ ವಾರ್ತಾ ವಾಹಿನಿಗಳು. ಅಂತಹ ಘಟನೆಗಳು ಜನಮಾನಸದಿಂದ ಮರೆಯಾದ ನಂತರ ಅದೇ ವ್ಯಕ್ತಿಗಳಿಗೆ ವೀಳ್ಯ ನೀಡಿ ಕರೆತಂದು ಕಾರ್ಯಕ್ರಮದಲ್ಲಿ ಅವಕಾಶ ಕೊಡುವುದು ಅದೇ ಚಾನೆಲ್‌ಗಳು! ಇಂತಹ ವ್ಯಕ್ತಿಗಳನ್ನು ಬಹಿಷ್ಕರಿಸಲು ಸಾಧ್ಯವಿಲ್ಲವೇ?

–ದೀಪಕ್ ಕಂಬದಕೋಣೆ, ಉಡುಪಿ

## ಮಾದರಿಯಾಗಲಿ!

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿ 'ರಾಧಾ ರಮಣ' ಉಳಿದೆಲ್ಲ ಧಾರಾವಾಹಿಗಳಂತೆಯೇ ಗೂಂಡಾಗಿರಿ, ಹೊಟ್ಟೆಕಿಚ್ಚು, ಮದುವೆ ಮುರಿಯುವ ಪ್ರಯತ್ನಗಳಿಂದಲೇ ಕೂಡಿದ್ದರೂ ಕೆಲವೊಮ್ಮೆ ಒಳ್ಳೆಯ ತಿರುವು ತೆಗೆದುಕೊಂಡು ಜನಪ್ರಿಯವಾಗುತ್ತಿದೆ. ಇತ್ತೀಚಿನ ತಿರುವು ರಮಣ್ ತನ್ನ ಹುಟ್ಟುಹಬ್ಬವನ್ನು ಅನಾಥಾಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ಮಕ್ಕಳೊಂದಿಗೆ ಸಂಭ್ರಮಿಸುವುದು ನಿಜಕ್ಕೂ ಶ್ಲಾಘನೀಯ. ಧಾರಾವಾಹಿಗಳಲ್ಲಿ ಆಡಂಬರದ ಹುಟ್ಟು ಹಬ್ಬವನ್ನು ನೋಡಿ ಬೇಸತ್ತಿದ್ದ ಪೋಷಕರಿಗೆ, ಮಕ್ಕಳಿಗೆ ಈ ರೀತಿಯ ಆಚರಣೆ ಮಾದರಿಯಾಗಲಿ ಎಂದು ಆಶಿಸೋಣ.

–ಶಾಂತಾ ನಾಗರಾಜ್ ಕೆ., ಬೆಂಗಳೂರು

## ಉಪಯುಕ್ತ ಕಾರ್ಯಕ್ರಮ

ಸುವರ್ಣ ವಾಹಿನಿಯ ಪಾಕಶಾಲೆ ಕಾರ್ಯಕ್ರಮದಲ್ಲಿ ಗೌರಿ ಸುಬ್ರಹ್ಮಣ್ಯ ಅವರ ಆರೋಗ್ಯದ ಸಲಹೆಗಳು ಮತ್ತು ಪ್ರಕೃತಿಯಲ್ಲಿ ಸಿಗುವ ಕಾಯಿ, ಹಣ್ಣು, ಎಲೆ, ತೊಗಟೆ, ಬೇರು ಇತ್ಯಾದಿಗಳಿಂದ ತಯಾರು ಮಾಡುವ ಮನೆ ಔಷಧಿಗಳು ಎಲ್ಲರಿಗೂ ತುಂಬ ಉಪಯುಕ್ತವಾಗಿವೆ.

–ಶಾಲಿನಿ, ಬೆಂಗಳೂರು

## ಶಾಂತಂ ಪಾಪಂ

ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಶಾಂತಂ ಪಾಪಂ' ನೈಜ ಘಟನೆಯಿಂದ ಕೂಡಿದೆ. ನಡೆದುಹೋದ ಘಟನೆಯನ್ನು ಪ್ರತಿ ಸೃಷ್ಟಿಸುವುದು ಸುಲಭದ ಮಾತಲ್ಲ. ಆದರೆ ಇಲ್ಲಿ ಪಾತ್ರಗಳನ್ನು ಮರು ಸೃಷ್ಟಿಸಿ ತೋರಿಸಲಾಗುತ್ತಿದೆ. ಅನೈತಿಕ ಸಂಬಂಧ, ಮೂಢನಂಬಿಕೆ, ಅಸ್ವಾಭಾವಿಕ ಸಾವು, ಕೊಲೆ... ಹೀಗೆ ಒಂದೊಂದು ಪ್ರಕರಣವೂ ಕಂಡೂ ಕೇಳರಿಯದ ಅಪರಾಧ ಜಗತ್ತನ್ನು ಅನಾವರಣಗೊಳಿಸುತ್ತದೆ.

–ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ